International Journal for Multidisciplinary Research (IJFMR)

E-ISSN: 2582-2160 ● Website: www.ijfmr.com ● Email: editor@ijfmr.com

# ಭಾರತ : ಒಂದು ವಿಶ್ಲೇಷಣೆ

**ಡಾ. ಬಿ.ಎಸ್.ಗೀತಾ**

ಭಾರತ ಎನ್ನುವ ಬಗ್ಗೆ ಇತ್ತೀಚಿನ ದಿನ ಜನಮಾನಸದಲ್ಲಿ ಸಾಕಷ್ಟು ಚರ್ಚೆ ಆಗುತ್ತಿದೆ. ಭಾರತ ಎನ್ನುವ ಹೆಸರು ಹುಟ್ಟಿಕೊಂಡಿದ್ದು ಹೇಗೆ ಅದರ ಇತಿಹಾಸವನ್ನು ನೋಡುವ ಕುತೂಹಲ ಸಹಜವೇ. ಈ ಹೆಸರಿನ ಉಗಮ ಮತ್ತು ಪ್ರತಿನಾಮಗಳು ನಿಜಕ್ಕೂ ಕುತುಹಲಕಾರಿ ವಿಷಯ. ಇದರ ಪ್ರಾಚೀನತೆಯ ಬಗ್ಗೆ ತಿಳಿದುಕೊಳ್ಳುವುದು ಇಂದಿನ ದಿನ ಅವಶ್ಯಕವೆ. ಬರೀ ಹೇಳಿಕೆಗಳಿಂದ ಗ್ರಹಿಸುವುದು ಸಮಂಜಸವಲ್ಲ. ಆಧಾರಗಳ ಮುಖೇನ ಅರಿಯುವುದು ಯುಕ್ತವಾದ ವಿಧಾನ. ಅದರಲ್ಲೂ ಲಿಖಿತ ದಾಖಲೆಗಳ ಆಧಾರಗಳೆಂದರೆ, ಶಾಸನ, ಕಾವ್ಯಗಳನ್ನು ಅವಲೋಕಿಸಬೇಕಾಗುತ್ತದೆ. ಹಾಗೆಯೇ ಭೂಗೋಳ ಮತ್ತು ಇತಿಹಾಸದಲ್ಲಿ ಪ್ರಥಮ ಪ್ರಶಸ್ತ್ಯ ಯಾವುದಕ್ಕೆ ಎಂಬ ಪ್ರಶ್ನೆ ಬಂದಾಗ ಕಾಂಟ್ 'Geography lies at the basis of history' ಎನ್ನುತ್ತಾನೆ.

ವಿಸ್ತಾರವಾದ ಭೂಪ್ರದೇಶವನ್ನು ಗುರುತಿಸಲು ಅನುಕೂಲವಾಗುವಂತೆ ಏರ್ಪಡಿಸಿಕೊಂಡ ವಿಭಾಗಗಳೇ ಪ್ರಾದೇಶಿಕ ವಿಭಾಗಗಳು. ರಾಜ್ಯ, ದೇಶ, ನಾಡು, ಸೀಮೆ, ಪಾಡಿ, ವಾಡಿ, ಮಂಡಲ, ಜನಪದ, ವಿಷಯ, ಆಹಾರ, ಭೋಗ,ಭುಕ್ತಿ, ಕಂಪಣ, ವೇಂಠೆ, ಸ್ಥಳ, ಇವು ಇಂಥ ವಿಭಾಗಗಳ ಹೆಸರು.

'ಭರತ ಮಹೀಮಂಡಲಕ್ಕಾಭರಣಂ ಕುಂತಳಪುರಾತಳಂ ತದ್‌ವಿಷಯಕ್ಕೆ ಎರಡರುನೂರು ಲಲಾಟಮಂ ಪುಲಿಕರಜನಪದಂ ಅದಕ್ಕೆ ನವಪವಿಮುಕರಂ' ಪುರಿಗೆರೆ ನಾಡೊಳಗೆ ಶ್ರೀ ಪುಂಜಂ ದೇವತಾ ನಿವಾಸ ವಿಳಾಸವ್ಯಾಪರಕೃತಂ ನೆಗಲ್ದ ಮಹಾಪಟ್ಟಣಂ ಒಳ್ವನಾಳ್ದ ಪುಲಿಗೆರೆಯೆಸೆಗಂ"

ಭರತಾವನಿಯೊಳುಕುಂತಳ
ಧರಿತಿರ ರಂಜಿಸುವುದಿಲ್ಲ ಪುರಿಕರದೇಶಂ
ಕರಮೊಪ್ಪಗುಮಾ ವಿಷಯಂ–
ತರರಾಜದ್ರಾಜಧಾನಿಪುರಿಕರನಗರಂ //(EP.I,Vol.XVI.p.46)

ಭರತಖಂಡಕ್ಕೆ ಕುಂತಳ ದೇಶವು ಆಭರಣಪ್ರಾಯವೆಂದೂ ಆ ದೇಶಕ್ಕೆ ಎರಡಱುನೂಱು ಎಂಬದು ಲಲಾಟವೆಂದೂ ಅದರಲ್ಲಿ ಪುಲಿಗೆಱ್ ಎಂಬ ಜನಪದವು 'ನವಪಮಿ ಮುಕುರ'ದಂತೆ ಇದೆಯೆಂದೂ, ಆ ಪುಲಿಗೆರೆ ನಾಡಿನಲ್ಲಿ 'ಶ್ರೀಪುಂಜಂದೇವತಾ ನಿವಾಸ ವಿಳಾಸ ವ್ಯಾಪಾರಕೃತ'ವಾದ 'ಮಹಾಪಟ್ಟಣ'ವೆನ್ನಿಸಿಕೊಂಡ ಪುಲಿಗೆರೆಯು ಶೋಭಿಸುತ್ತಿದೆಯೆಂದೂ ಶಾಸನವೊಂದು ಹೊಗಳುತ್ತದೆ(EI.XIII.p.329,929 A.D.). ಭಾರತಭೂಭಾಗಕ್ಕೆ ಕುಂತಲವು ಆಭರಣದಂತೆಅದಕ್ಕೆ ಎರಡುನೂರು ಹಣೆಯಂತೆಯೂ ಈ ಎರಡುನೂರು ಹಣೆಗೆ ಪುಲಿಗೆರೆ ಕಿರೀಟದಂತೆ ಇತ್ತು ಎನ್ನುವುದು ಮುಖ್ಯವಾದದ್ದು.

ಶಾಸನದಲ್ಲಿ ಉಲ್ಲೇಖಗೊಂಡಿರುವ ಪ್ರತಿ ಶಬ್ಧವನ್ನು ವಿವೇಚನೆಗೆ ಒಳಪಡಿಸೋಣ. ಕುಂತಲದ ಬಗ್ಗೆ ನೋಡೋಣ;

–ಕುಂತಳಪುರಾತಳಂ(EP.I,Vol.XVI.p.46).**ಕುಂತಳದೇಶ–ಭರತಮಹೀಕಾನ್ತೆಯ** ಕುಂತಳದಂತೆಸೆವುತಿರ್ದ್ದ ಕುಂತಳದೇಶದ ತುಂಗಭದ್ರಾ ನದಿಯಿಂ ತೆಂಕಲ್(ಸೌಇಇ.IX-.I, 296-9;1176) ಕುಂತಳವಿಷಯವೆನ್ನುವ ಪದ ಕ್ರಿ.ಶ. ೧೦೫೮ರಷ್ಟು ಹಿಂದಕ್ಕೆ ಹೋಗುತ್ತದೆ. ಅನುಪಮ ರವನಿಪರನ್ಯಾವನಿಪ ಶ್ರೀಕಂಠ[ಳ][ಕ್ಕೆ]ಕ್ಕೈನಿದಿ ನಿಜಾವನಿಗೆ ತೆಗೆಯಲ್ತತದೀಯಾವನಿ ಕುಂತಳ ವಿಷಯವೆನಿಸಿ ಪೆಸರ್ವೆತ್ತೆಸೆಗುಂ (ಕಇಅ.೨–೨–೨೨;೧೦೫೮). ಪ್ರಾಚೀನ ಕರ್ನಾಟಕದ ಉತ್ತರಪ್ರದೇಶಕ್ಕೆ "ಕುಂತಲ" ವೆಂದು ಹೇಳುತ್ತಿದ್ದರು(ಮೈವಾಸ್ತು.೨).

ಈ ದೇಶವಿಭಾಗದ ಕ್ಷೇತ್ರಗಳು ಆ ಕಾಲದ ರಾಜಕೀಯ ಪರಿಸ್ಥಿತಿಗನುಸರಿಸಿ ಕಾಲಕಾಲಕ್ಕೆ ಬದಲಾಗುತ್ತಿದ್ದುವು. ಕುಂತಲವೆಂಬ ದೇಶವಾಚಕ ಹೆಸರಿನಲ್ಲಿ ಅಳವಡುವ ಪ್ರದೇಶವು ಕಾಲಕಾಲಕ್ಕೆ ಹೆಚ್ಚು ಕಡಿಮೆಯಾಗಿ ಕಂಡುಬರುವುದಕ್ಕೆ ಇದೇ ಕಾರಣ. ದ್ವಾರಕೆಯಿಂದ ಬನವಾಸಿಯ ನಾಡು ಸಂಪೂರ್ಣ ಕುಂತಲವೆಂದು ಒಮ್ಮೆ ಕರೆಯಲ್ಪಡುತ್ತಿರಬೇಕು. ಕೆಲವೊಂದು ಪ್ರದೇಶಕ್ಕೆ ಕರ್ಣಾಟವೆಂಬ ಹೆಸರು ಮುಂದೆ ಬಂದ ಬಳಿಕ ಉಳಿದ ಭಾಗಕ್ಕೆ ಕುಂತಲವೆಂಬುದು ಹಾಗೆಯೆ ಉಳಿದು ಕೊಂಡಿತು. ಆಮೇಲೆಯೂ ಹಳೆಯ ರೂಢಿಯೊಳಗಿನ ಹೆಸರು ಒಮ್ಮಲೆ ಬಿದ್ದು ಹೋಗುವುದಿಲ್ಲ. ಹೀಗಾಗಿ ಒಂದೇ ಪ್ರದೇಶಕ್ಕೆ ಒಂದೇ ಕಾಲಕ್ಕೆ ಕರ್ಣಾಟವೆಂದೂ ಕುಂತಲವೆಂದೂ ಹೆಸರು ಬಂದಿರುವುದು ಸ್ವಾಭಾವಿಕವಾಗಿದೆ. ದ್ವಾರಕೆಯಿಂದ ಆರಂಭಮಾಡಿ ಈ ಪ್ರದೇಶವು ಆರ್ಯೀಕರಣಕ್ಕೆ ಒಳಗಾಗಿ ಅಲ್ಲಿಯ ಮೂಲಿಗರಾದ ಪಟ್ಟಿಲರು ತಮ್ಮ ಭಾಷೆಯನ್ನು ಸಂಪೂರ್ಣವಾಗಿ ಕಳೆದುಕೋಳ್ಳುವವರೆಗೂ ಕುಂತಲವೆಂದರೂ ಸರಿಯೆ; ಕರ್ಣಾಟವೆಂದರೂ ಸರಿಯೆ. ಆದರೆ, ಅಲ್ಲಿ ಕಂನುಡಿಯು ಕಣ್ಮರೆಯಾದ ಬಳಿಕ ನೃಪತುಂಗನ ಕವಿರಾಜಮಾರ್ಗದಲ್ಲಿ ಹೇಳಿದಂತೆ ಗೋದೆಯಿಂದ ದಕ್ಷಣಕ್ಕೆ ಮಾತ್ರ ಕಂನಾಡು ಉಳಿದು, ಉತ್ತರವು ಪೈಠಣ, ವರ್ಹಾಟ ಮೊದಲಾದ ಭಾಗಗಳು ರಾಜಶೇಖರಾದಿ ಕವಿಗಳು ಹೆಸರಿಸಿದಂತೆ ಕುಂತಲವಾಗಿ ಉಳಿದವು. ಹೀಗೆ ಕುಂತಲ ಮತ್ತು ಕರ್ಣಾಟಗಳು ಬೇರೆಯಾದವು. ಆದರೂ ಕಂನಾಡಿಗೆ ಕುಂತಲವೆಂದೆಂಬ ವಾಡಿಕೆ ಒಮ್ಮಲೆ ನಿಂತುಹೋಗಲಿಲ್ಲ(ಶಂಬಾ ಜೋಶಿ೧೯೬೬;೧೫೨–೧೫೩). ಭಾರತವು, ಉತ್ತರಭಾರತ ಹಾಗೂ ದಕ್ಷಿಣಭಾರತವಾಗಿ ವಿಭಾಗವಾಗಿದ್ದಿರುವ ಸೂಚನೆ ಇಲ್ಲದೆ.

**ಎರಡರುನೂರು**

ಪಂಪನು ತನ್ನ ಭಾರತವನ್ನು 'ರಾಜದ್ರಾಜಕಮೆನಿಸಿದ ಸಾಜದ ಪುಲಿಗೆರೆಯ ತಿರುಳ ಕನ್ನಡ'ದಲ್ಲಿ (ಪಭಾ.೧೪–೫೮) ಬರೆದಿರುವುದಾಗಿ ಹೇಳಿಕೊಂಡಿದ್ದಾನೆ. ರನ್ನನು ತನ್ನ ಗದಾಯುದ್ಧದಲ್ಲಿ ಕನ್ನಡಂ ಎರಡರುನೂರರ ಕನ್ನಡಂ ಆ ತಿರುಳ ಕನ್ನಡಂ"' ಎಂದು ಎರಡರುನೂರರ ಕನ್ನಡವನ್ನು ಹೊಗಳಿದ್ದಾನೆ. 'ಎರಡುನೂರು' ಎಂಬ ಪ್ರದೇಶದಲ್ಲಿ 'ಪುಲಿಗೆರೆ' ಎಂಬ ಮಹಾಪಟ್ಟಣವಿದ್ದಿತು ಎಂದು ಶಾಸನವೊಂದು ಹೇಳುತ್ತದೆ(EI.XII.P.329,929A.D.).ಬೆಳ್ವೊಲ ಮೂನ್ನೂರು ಮತ್ತು ಪುಲಿಗೆರೆ ಮೂನ್ನೂರು ಈ ಎರಡೂ ವಿಭಾಗಗಳನ್ನು ಸೇರಿಸಿ ಎರಡಾರ್ನೂರು ಎಂಬುದಾಗಿ ಕರೆದಿರುವುದುಂಟು(IA.XII,256-12;971A.D).

**'ಜನಪದ**

ಕ್ರಿ.ಶ.೯೨೯ರ ಶಾಸನವೊಂದರಲ್ಲಿ'ಜನಪದ' ಎಂಬುದು ನಾಡು ಎಂಬರ್ಥದಲ್ಲಿ ಕಾಣಿಸಿ ಕೊಳ್ಳುತ್ತದೆ(IA.VI.P.31,C.520 A.D.) ಕವಿರಾಜಮಾರ್ಗದಲ್ಲಿ ಬರುವ ಜನಪದ ಎಂಬ ಮಾತಿಗೆ ನಾಡು ಎಂದೇ ಅರ್ಥವಾಗುತ್ತದೆ. ರಾಜಾಧಾನಿಯನ್ನು 'ನೆಲೆವೀಡು', ಅಧಿಷ್ಠಾನ ಎಂದು ಶಾಸನದಲ್ಲಿ ಕರೆದಿದೆ(IA.XIX.p.149,692 A.D.). ಪುಲಿಗೆರೆ ಅಥವಾ ಈಗಿನ ಲಕ್ಷ್ಮೇಶ್ವರ, ಭರತಖಂಡಕ್ಕೆ ಕುಂತಳ ದೇಶವು ಆಭರಣಪ್ರಾಯವೆಂದೂ ಆದೇಶಕ್ಕೆ ಎರಡಱುನೂಱು ಎಂಬದು ಲಲಾಟವೆಂದೂ ಅದರಲ್ಲಿ ಪುಲಿಗೆಱೆ ಎಂಬ ಜನಪದವು 'ನವಪಮಿ ಮುಕುರ'ದಂತೆ ಇದೆಯೆಂದೂ, ಆ ಪುಲಿಗೆರೆ ನಾಡಿನಲ್ಲಿ 'ಶ್ರೀಪುಂಜಂದೇವತಾ ನಿವಾಸ ವಿಳಾಸ ವ್ಯಾಪಾರಕೃತ'ವಾದ 'ಮಹಾಪಟ್ಟಣ'ವೆನ್ನಿಸಿಕೊಂಡ ಪುಲಿಗೆರೆಯು ಶೋಭಿಸುತ್ತಿದೆಯೆಂದೂ (EI.XIII.p.329,929 A.D.)ಶಾಸನವೊಂದು ಹೊಗಳುತ್ತದೆ(ಗೀತಾ ಬಿ.ಎಸ್. ೨೦೧೭;೨೯-೩೦).

ಭರತಾಮನಿಯೋಳು ಕುಂತಳ ಧರಿತ್ರಿ ರಂಜಿಸುವುದಲ್ಲಿ ಪುರಿಕರದೇಶಂ ಕರಮೊಪ್ಪುಗುಮಾ ವಿಷಯಂತರರಾಜ ದ್ರಾಜಧಾನಿ ಪುರಿಕರನಗರಂ (Ep.I.vol.xvI.p.46) ಈ ವರ್ಣನೆಯಿಂದ ಕರ್ನಾಟಕ (ಕುಂತಳ)ದಲ್ಲಿ ರಾಜಧಾನಿ ಪುರಿಕರವಾಗಿತ್ತೆಂಬುದೂ ತಿಳಿದುಬರುತ್ತದೆ. ಹಾಗೆಯೇ 'ವ್ಯಾಪಾರಕೃತ'ವಾದ 'ಮಹಾಪಟ್ಟಣ'ವೆನ್ನಿಸಿಕೊಂಡ ಪುಲಿಗೆರೆಯುಎನ್ನುವ ವಿವರವು ವ್ಯಾಪರಕ್ಕೆ ಹೆಸರು ವಾಸಿಯಾಗಿರುವುದರಿಂದ ಸಹಜವೇ ಪುಲಿಗೆರೆ ರಾಜಾಧಾನಿಯಾಗಿತ್ತು ಎನ್ನುಬಹುದು.

ಹಾಗಿದ್ದರೆ ಭಾರತಮಹಿಮಂಡಲಕ್ಕೆ ಕರ್ನಾಟಕ ರಾಜಾಧಾನಿಯಾಗಿತ್ತಾ !? ಈ ವಿಷಯದ ಬಗ್ಗೆ ಒಂದಿಷ್ಟು ಒಳತಿರುಳುಗಳನ್ನು ನೋಡುವುದಾದರೆ, ಅಂತಹ ಮಹತ್ವದ ದಾಖಲೆಯೊಂದು ದಾವಣಗೆರೆ ತಾಲ್ಲೂಕಿನ ಶಾಸನವೊಂದು ಹೇಳುತ್ತದೆ. 'ಕರ್ಣಾಟಕ ವರವಿಷಯಂ ಸತತಂ' ಎಂದು ತಿಳಸುತ್ತದೆ(ಗೀತಾ ಬಿ.ಎಸ್.೧೯೯೬). ಎರಡುನೂರು ಎಂಬ ಪ್ರದೇಶದಲ್ಲಿ ಪುಲಿಗೆರೆ ಇತ್ತು ಅದು ರಾಜಾಧಾನಿಯಾಗಿತ್ತು ಎಂದರೆ, ಕುಂತಳದಲ್ಲಿ ಪುರಿಕರದೇಶ ಅಷ್ಟು ಪ್ರಧಾನ್ಯತೆಯನ್ನು ಪಡೆದಿತ್ತು ಎನ್ನವುದಾದರೆ ಶಾಸನಗಳ ಪ್ರಕಾರ ಒಂದು ಸಂದರ್ಭದಲ್ಲಿ ಪುಲಿಗೆರೆ ಅಥವಾ ಪುರಿಕರ ಈ ಭಾಗಗಳಲ್ಲಿ ನಗರವಾಗಿ, ಪಟ್ಟಣವಾಗಿ, ರಾಜಾಧಾನಿಯಾಗುವಷ್ಟು ಅಭಿವೃದ್ಧಿಯನ್ನು ಹೊಂದಿರುವಂತೆ ಕಾಣುತ್ತದೆ. ಭರತಾಇಳೆಯೊಳಗೆ ಪುಲಿಗೆರೆ ರಾಜಧಾನಿಯಾಗಿತ್ತು ಎನ್ನವ ವಿಷಯವೇ ಇಲ್ಲಿ ಪುಷ್ಟಿಕೊಡುತ್ತಿದೆ. ಹಾಗೆಯೇ ನರಸಿಂಹಚಾರ್ ಆರ್ ಹೇಳುವ ಪ್ರಕಾರ-ಪೂರ್ವದಲ್ಲಿ ಕರ್ಣಾಟಕ ಎಂಬುದು ದಕ್ಷೀಣ ಹಿಂದೂದೇಶದ ಎತ್ತರವಾದ ಪ್ರಾಂತ್ಯಕ್ಕೆ ಹೆಸರಾಗಿದ್ದಿತು. ಕರ್ನಾಟಕ ಭಾರತದ ರಾಜಾಧಾನಿಯಾಗಿರುವ ಕುರಿತು ಹೇಳುವುದಕ್ಕೆ ದೊಡ್ಡ ಆಯಾಮವೇ ಬೇಕಾಗಿರುವುದರಿಂದ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ, ಭಾರತದ ವಿಷಯಕ್ಕೆ ಗಮನಹರಿಸೋಣ-

ಪೊರಿಗೆಱೆಯಾ ಮಹಾಜನಕ್ಕುಂ(EI.XIV, 190-2;725)ಪುಲಿಗೆಱೆಯಾ ಮೂರುಜ್ಜೇರಿಯಾ(EI.VI, 166-3 ;763) ಸುಮಾರು ಆರು ಏಳನೇ ಶತಮಾನದಷ್ಟು ಹಿಂದೆ ಕೂಡ ಪುಲಿಗೆರೆ ಪ್ರದೇಶದ ಬಗ್ಗೆ ಮಾಹಿತಿ ಸಿಗುವುದರಿಂದ ಭಾರತ ಎನ್ನುವ ಹೆಸರು ಇನ್ನೂ ಹಿಂದಿನ

ಶತಮಾನಕ್ಕೂ ಹಿಂದೆ ಇತ್ತು ಎನ್ನುವುದು ತಿಳಯುತ್ತದೆ. ಪುಲಿಗೆರೆ ಭಾರತದಲ್ಲಿ ಮುಖ್ಯ ಪಟ್ಟಣ ರಾಜಾಧಾನಿಯಾಗಿತ್ತು ಎನ್ನವುದನ್ನು ನೋಡಿದ್ದೇವೆ.(ಗೀತಾ ಬಿ.ಎಸ್.೨೦೧೩)

**ಭರತ ಎಂಬ ಹೆಸರಿನ ಅನ್ವಯ ಅರ್ಥ:-**

ಅಭ್ಯುದಯ, ಉನ್ನತಿ, ಸಂಪೂರ್ಣ, ಅಧಿಕವಾದ,ಇಡಿಯಾದ ಎನ್ನುವ ಅರ್ಥಗಳವೆ

ಪಂಪನ ಆದಿಪುರಾಣ ಕಾವ್ಯದಲ್ಲಿ ಭರತಖಂಡ(೫-೧೩),ಭಾರತಕ್ಷೇತ್ರ, ಭರತಮಂಡಲ ಎನ್ನುವ ಉಲ್ಲೇಖಗಳು ಸಿಗುತ್ತವೆ. ಆದಿಪುರಾಣ ಕಾವ್ಯದಲ್ಲಿ **'ಭರತ'** ಎನ್ನುವ ಹೆಸರನ್ನು ಮಗುವಿಗೆ ಇಟ್ಟಿರುವುದಕ್ಕೆ ವಿವರಣೆಯಿದೆ.

ಭಾವಿಭರತೇಶಪದಮುಮಿ
ಳಾವಿಪುಳಪ್ರೇಮಭರಮುಮೆರ್ದೆಗೊಂಡಿರೆ ಸ
ದ್ಭಾವದಿನಿಟ್ಟುದು ಬಂಧುಜ
ನಾವಳಿ ಕೂಸಿಂಗೆ ಭರತನೆಂಬೀ ಪೆಸರಂ ॥ಆದಿ. ೮-೩೭ ॥

ಬಂಧು ಜನರ ಮನಸ್ಸೂರೆಗೊಂಡುದರಿಂದ ಅವರೆಲ್ಲರೂ ಸೇರ ಮಗುವು ಭವಿಷ್ಯದಲ್ಲಿ, ವಿಶ್ವವಿಖ್ಯಾತನಾಗುವನು ಹಾಗೆಯೇ ಭರತೇಶ ಪದವಿಯನ್ನು ಹೊಂದುವನು , ಮಹತ್ತರವಾದುದನ್ನು ಸಾಧಿಸುವನು ಎನ್ನವ ಕಾರಣಕ್ಕೆ ಭರತ ಎನ್ನುವ ಹೆಸರನ್ನು ಇಡುತ್ತಾರೆ.

ವಚನ॥ ಅಂತು ಭರತಂ ಭರತಮಂಡಳಮನೇಕಚ್ಛತ್ರಚ್ಛಾಯೆಯಿಂ ಪ್ರತಿಪಾಳಿಸುತ್ತುಮಿರೆಯಿರೆ,(೫-೪೪)
ಭರತೇಶ್ವರನು, ಭರತ ಭೂಭಾಗವನ್ನು, ಒಂದೇ ಕೊಡೆಯ ನೆರಳಿನಲ್ಲಿ, ಸಂರಕ್ಷಣೆ ಮಾಡುತ್ತಿರಲು-

ವಚನ ॥ ಅದಲ್ಲದೆಯುಂ ಪೂರ್ವಾಪರವಿದೇಹಂಗಳ್ಗೆ ದೇವನಿಕಾಯದೊಡನೆ
ಜಿನೇಂದ್ರವಂದನಾ ಭಕ್ತಿಯಿಂ ಪೋದಲ್ಲಿ ಭರತಕ್ಷೇತ್ರದೊಳೀ
ಯುಗದೊಳ್ ತೀರ್ಥಕರರುಂ ಚಕ್ರವರ್ತಿಗಳುಮಪ್ಪರೆಂದು
ಸರ್ವಜ್ಞರ್ ಬೆಸೆಸೆ ಪಲವು ಸೂಳ್ಗಳಾಮೆಲ್ಲಂ ಕೇಳ್ದಱಿದೆವು, (ಆಪು.೧೨-೧೦೫)

ಅದೂ ಅಲ್ಲದೆ ಪೂರ್ವ ಮತ್ತು ಪಶ್ಚಿಮ ದೇಶಗಳಿಗೆ ದೇವಸಮೂಹದೊಡನೆ ಜಿನೇಂದ್ರವಂದನಾಭಕ್ತಿಯಿಂದ ಹೋದಾಗ ಭರತಕ್ಷೇತ್ರದಲ್ಲಿ ಈ ಯುಗದಲ್ಲಿ ತೀರ್ಥಂಕರರೂ ಚಕ್ರವರ್ತಿಗಳೂ ಹುಟ್ಟುವರೆಂದು ಪರಮಜ್ಞಾನಿಗಳಾದವರು ಹಲವಾರು ಬಾರಿ ಹೇಳದುದನ್ನು ಕೇಳಿ ಬಲ್ಲೆವು. ಪದ್ಯದ ಈ ವಿವರಣೆಯಂತೆ, ಭರತಕ್ಷೇತ್ರವು ಅಷ್ಟೊಂದು ಪವಿತ್ರವೂ, ಮಹತ್ವವೂ ಆಗಿತ್ತು ಎಂದು ತಿಳದುಬರುತ್ತದೆ.

ಸುಮಾರು ಹತ್ತನೇ ಶತಮಾನದ ಕವಿಯಾದ ಪಂಪ ತನ್ನ ಕಾವ್ಯ ಒಂದಕ್ಕೆ ಪಂಪಭಾರತ ಎಂದು ಹೆಸರಿಡುವಷ್ಟು ಭಾರತ ಎನ್ನವ ಪದ ಇಲ್ಲಿ ಪ್ರಸಿದ್ದೀಯನ್ನು ಪಡೆದಿತ್ತು ಎನ್ನುವುದು ತಿಳಯುತ್ತದೆ. ಫಂಪಭಾರತ ಕಾವ್ಯದ ಕಥಾವಸ್ತು ಮಹಾಭಾರತ ಕಥೆಯನ್ನು ಆಧರಿಸಿದ್ದು. ಹಾಗೆಯೇ ಶಾಸನವೊಂದರಲ್ಲಿ ಮಹಾಭಾರತದ ಉಲ್ಲೇಖವಿದೆ **ಮಹಾಭಾರತ**(ಸೌಇಇ.XI,II.129,1083).ಮಹಾಭಾರತದ

ಕಥೆಯಲ್ಲಿ ಬರುವ ದುಷ್ಯಂತ ಶಾಕುಂತಲೆಯ ಮಗನಾದ ಭರತನಿಂದಾಗಿ ಭರತ ಎನ್ನುವ ಹೆಸರು ಬಂತು ಹಾಗೆಯೇ ಆ ಭರತ ಚಕ್ರವರ್ತಿಯ ಆಳ್ವಿಕೆಯಿಂದ **ಭರತ** ಎಂಬ ಹೆಸರು ಈ ದೇಶಕ್ಕೆ ಬಂತು ಎನ್ನುವ ಪ್ರತೀತಿ ಇದೆ.

ಆ ಸೋಮವಂಶದಲ್ಲಿ ಹುಟ್ಟಿದ ಅನೇಕರು
ಅತ್ಯತಿಶಯವೂ ಪ್ರಸಿದ್ಧವೂ ಆದ ಕೀರ್ತಿಯಿಂದ
ಲೋಕವನ್ನೆಲ್ಲ ಮುಚ್ಚಿ ಮರಣ ಹೊಂದಲಾಗಿ
ಅತ್ಯಂತವಿಳಾಸದಿಂದ ಕೂಡಿದ ದುಷ್ಯಂತನ
ಮಗನಾದ ಭರತನೆಂಬುವನು ಪ್ರಸಿದ್ಧನಾದನು.॥ಪಭಾ. ೧– ೬೨ ॥

ಚಾರುಚರಿತ್ರಂ ಭರತನ
ಪಾರಗುಣಂ ತನ್ನ ಪೆಸರೊಳಮರ್ದೆಸೆಯೆ ಯಶೋ ।
ಭಾರಂ ಕುಲಮುಂ ಕಥೆಯುಂ
ಭಾರತಮೆನೆ ನೆಗಳ್ದಿನಂತು ನೆಗಟ್ಟುದು ಭೂಪರ್ ॥ಪಭಾ. ೧– ೬೩ ॥

ಸಚ್ಚರಿತ್ರನೂ ಅಪಾರಗುಣಯುತನೂ ಯಶಸ್ಸಿನ ಭಾರದಿಂದ ಕೂಡಿದವನೂ ಆದ ಭರತನು ತನ್ನ ಕುಲವೂ ಕಥೆಯೂ ತನ್ನ ಹೆಸರಿನಲ್ಲಿ ಸೇರಿ **ಭಾರತವೆಂದು** ಪ್ರಸಿದ್ಧಿಯಾಗುವ ಹಾಗೆ ಪ್ರಖ್ಯಾತನಾದನು.**ರಾಜರು ಹೀಗೆ ಪ್ರಸಿದ್ಧರಾಗಬೇಕು** ಎನ್ನುವ ಮಾತಿನಲ್ಲಿಯೇ ಎಷ್ಟೊಂದು ಔಚಿತ್ಯವಿದೆ. ಮೂರುಲೋಕದ ಸೌಂದರ್ಯವನ್ನು ಬ್ರಹ್ಮನು ಒಂದು ಕಡೆ ರಾಶಿ ಮಾಡಿದಹಾಗೆಸಮಸ್ತ ವಸ್ತು ವಿಸ್ತಾರದಿಂದ ಮನೋಹರವಾಗಿದ್ದ ಹಸ್ತಿನಾಪಟ್ಟಣದಲ್ಲಿ ಭರತವಂಶಶ್ರೇಷ್ಠರು ರಾಜ್ಯಭಾರ ಮಾಡುತ್ತಿದ್ದರು.

**ಭರತ ಎನ್ನುವ ಪದದ ಉಚ್ಚಾರಣೆಯಲ್ಲಿ ಕೆಲವು ಅಪಭ್ರಂಷಗಳು ಕಂಡು ಬರುತ್ತಿವೆ. ಭರತ ಎನ್ನುವ ಅರ್ಥವೇ ಇಲ್ಲಿ ಬದಲಾಗುತ್ತಿರುವಂತಿದೆ–**

ಭರತ್,ಶರತ್,ಪ್ರಶಾಂತ್,ಶ್ರೀಕ್ರಾಂತ್ ಈ ಎಲ್ಲ ಶಬ್ದಗಳ ರೂಪಗಳು, ಸಂಸ್ಕೃತವೂ ಅಲ್ಲ, ಕನ್ನಡವೂ ಅಲ್ಲ, ಭರತ, ಶರದ, ಪ್ರಶಾಂತ=ಅಧಿಕ ಶಾಂತಿಯುತ, ಶ್ರೀಕಾಂತ=ಲಕ್ಷ್ಮೀಪತಿ, ಎಂಬುವು ಸರಿಯಾದ ರೂಪಗಳು. ತಮಿಳರು ರಾಮನ್, ಭರತನ್ ಮುಂತಾಗಿ ಹೆಸರಿಟ್ಟುಕೊಳ್ಳುವುದನ್ನೂ ಪಾಶ್ಚಾತ್ಯರಲ್ಲಿರುವ ಅರ್ಧಾಕ್ಷರದಿಂದ ಕೊನೆಗಾಣುವ ಹೆಸರುಗಳನ್ನೂ ನೋಡಿ ಅವುಗಳ ರೂಪದಿಂದ ಆಕರ್ಷಿತರಾಗಿ ತಮ್ಮ ಹೆಸರಿನಲ್ಲಿ ಸ್ವರವನ್ನು ಲೋಪಮಾಡಿಕೊಂಡಿರುವ ರೂಪಗಳು ಇವು. ಇದೊಂದುfasion ಅಷ್ಟೇ! ನಮ್ಮ ಊರುಗಳ ಬಡಾವಣೆಗಳ ಹೆಸರನ್ನೂ ಹೀಗೆಯೇ ಮಾಡುತ್ತಾರೆ ನೋಡಿ ಲಕ್ಷ್ಮೀಪುರಂ, ಮಲ್ಲೇಶ್ವರಂ, ಇಂದಿರಾನಗರ್, ಜೀವನ್ ಭೀಮಾನಗರ್, ಜಯನಗರ್, ಗಿರಿನಗರ್, ಈ ರೋಗ ವಾಸಿಯಾಗಬೇಕಾದರೆ ಸ್ವಲ್ಪ ಕಾಲ ಬೇಕಾಗುತ್ತದೆ.(ವೆಂಕಟಸುಬ್ಬಯ್ಯ ಜಿ ೧೯೯೬: ೩೦೫)

ಶಾಸನ ಕಾವ್ಯಗಳ ಆಧಾರದಿಂದ ವೇದ್ಯವಾಗುವುದೆನೆಂದರೆ ಪುರಾತನ ಕಾಲದಿಂದಲೂ ಭಾರತ, ಭರತ ಎನ್ನುವ ಹೆಸರಿತ್ತು ಈ ದೇಶಕ್ಕೆ ಎಂದು ವೇದ್ಯವಾಗುತ್ತದೆ.

**ಆಧಾರ ಗ್ರಂಥಗಳು;**

Epigraphia Indica-IV,XII,XIII, XVI,XVIII.

Indian Antiqury-IV,XIX,

Karnataka Inscription- I, II.

South Indian Inscription- IX-I, IX-II

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುಗಳು

ಪಂಪಮಹಾಕವಿಯ ಎರಡು ಕಾವ್ಯಗಳು, ೨೦೦೭,ಸಿಡಿ ರಾಂ,ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಗೀತಾ ಬಿ.ಎಸ್. ೨೦೧೭ **ಕನ್ನಡ ಶಾಸನಗಳ ಸಾಂಸ್ಕೃತಿಕ ಪದವಿವರಣ ಕೋಶ,** (ಅಪ್ರಕಟಿತ ಸಂಪ್ರಬಂಧ)ಸಿಇಎಸ್‌ಸಿಕೆ, ಮೈಸೂರು.

----------, ೨೦೧೫ **ಕರ್ನಾಟಕದ ಶಾಸನಗಳು: ಸ್ವರೂಪ ವೈವಿಧ್ಯತೆಗಳ ಸಮಗ್ರ ಅಧ್ಯಯನ,** ISBN, ISARA, ನವದೆಹಲಿ.

----------, ೨೦೦೩ "ಕನ್ನಡ ನಾಡಿನ ಭೌಗೋಳಿಕ ಅಂಶಗಳು; ಕನ್ನಡ ಸಾಹಿತ್ಯ ಮತ್ತು ಶಾಸನಗಳ ಹಿನ್ನೆಲೆಯಲ್ಲಿ" ಸಂಕ್ರಮಣ,ಸಂ.೪೧-೦೬, ಬೆಂಗಳೂರು.

----------, ೧೯೯೬ **ದಾವಣಗೆರೆ ತಾಲ್ಲೂಕಿನ ಶಾಸನಗಳು-ಒಂದು ಅಧ್ಯಯನ** (ಅಪ್ರಕಟಿತ ಸಂಪ್ರಬಂಧ) ಕನ್ನಡ ಸಾಹಿತ್ಯ ಪರಿಷತ್ತು.

ನರಸಿಂಹಚಾರ್ ಆರ್ ೧೯೭೨,೧೯೭೩ ಕರ್ನಾಟಕ: ಪ್ರಾಚೀನತೆ, ಮಹಿಮೆ, ವ್ಯುತ್ಪತ್ತಿ,ಲಿಪಿ, **ಕರ್ನಾಟಕ ಕವಿ ಚರಿತೆ,** ಸಂ೧, ಸಂ.೨, ಪು.೨೩-೩೧, ಪು.೫.೮.

ಶಂಬಾ ಜೋಶಿ ೧೯೬೬ **ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ: ಭಾಗ-೧,ಸಮಾಜ ಬುಕ್ ಡಿಪೊ,** ಧಾರವಾಡ.

ವೆಂಕಟಸುಬ್ಬಯ್ಯ ಜಿ ೧೯೯೭ **ಇಗೋ ಕನ್ನಡ,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

--------------